ದಿ.25-03-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

**ಮುಂದುವರೆದ ಪಾಟೀ ಸವಾಲು ಶ್ರೀ ಕೆ.ಸಿ.ಎಸ್ ವಕೀಲರಿಂದ:-**

ದಾವಾ ಆಸ್ತಿ ಮಠದ ಆಸ್ತಿ ಇರುತ್ತದೆ. ವಿವಾದಿತ ಮಠದ ಆಸ್ತಿ ನಂ.1-2-61/1 ಇರುತ್ತದೆ. ಅದರ ಪೂರ್ವಕ್ಕೆ ಭೀಮಸೇನರಾವ ಕುಲಕರ್ಣಿ ರವರ ಮನೆ, ಪಶ್ಚಿಮಕ್ಕೆ ದುರಗಮ್ಮನ ಗುಡಿ. ಉತ್ತರಕ್ಕೆ ರಸ್ತೆ, ದಕ್ಷಿಣಕ್ಕೆ ಗುಡ್ಡ ಮತ್ತು ಖಾಲಿ ಜಾಗ ಇರುತ್ತದೆ. ಉದ್ದ ಪೂರ್ವ-ಪಶ್ಚಿಮ 130.25 ಮೀಟರ್ * ಉತ್ತರ-ದಕ್ಷಿಣ 95 ಮೀಟರ್ ಇರುತ್ತದೆ. 2 ನೇ ಬ್ಲಾಕ್ 106.25 ಮೀಟರ್ * 16.80 ಮೀಟರ್ ಇರುತ್ತದೆ. 3 ನೇ ಬ್ಲಾಕ್ 94.95 * 32.50 ಮೀಟರ್ ಇರುತ್ತದೆ. 4 ನೇ ಬ್ಲಾಕ್ 71.35 * 14 ಮೀಟರ್ ಇರುತ್ತದೆ. 5 ನೇ ಬ್ಲಾಕ್ 8 * 8 ಮೀಟರ್ ಇರುತ್ತದೆ. ಎಲ್ಲಾ 1 ರಿಂದ 4 ನೇ ಬ್ಲಾಕಗಳಿಗೆ ಒಂದೆ ಚೆಕ್ಕುಬಂದಿ ಇದ್ದು 5 ನೇ ಬ್ಲಾಕಿಗೆ ಪೂರ್ವಕ್ಕೆ ಮಠದ ಜಾಗ, ಪಶ್ಚಿಮಕ್ಕೆ ಖಾಲಿ, ಉತ್ತರಕ್ಕೆ ಖಾಲಿ ಜಾಗ, ದಕ್ಷಿಣಕ್ಕೆ ಗುಡ್ಡ ಮತ್ತು ಖಾಲಿ ಜಾಗ ಇರುತ್ತದೆ. 5 ನೇ ಬ್ಲಾಕಿಗೆ ಸಂಬಂಧಿಸಿದಂತೆ ಖಾತಾ ಉತಾರ ಇಲ್ಲಾ ಎಂದರೆ ಸರಿಯಲ್ಲ. ನಿರ್ದಿಷ್ಟವಾಗಿ 5 ನೇ ಬ್ಲಾಕಿಗೆ ಸಂಬಂಧಿಸಿದ ಖಾತಾ ಉತಾರ ಹಾಜರು ಪಡಿಸಿರುವುದಿಲ್ಲ. ಅದು ಇರುವುದಿಲ್ಲ. ಸಾಕ್ಷಿಗೆ ನಿ.ಪಿ-1 ಗ್ರಾಮ ನಕಾಶೆಯನ್ನು ತೋರಿಸಲಾಗಿ ಅದರಲ್ಲಿ ತಮ್ಮ ಮಠದ ಜಾಗದ ಬೌಂಡರಿ ತೋರಿಸಿರುವುದಿಲ್ಲ ಅದೇ ರೀತಿ ಮಠದ ಜಾಗದ ಉದ್ದಳತೆಯನ್ನು ತೋರಿಸಿಲ್ಲ ಎಂದರೆ ಸರಿ. ನಮ್ಮ ಆಸ್ತಿ ಗ್ರಾಮ ಠಾಣಾದಲ್ಲಿ ಬರುತ್ತದೆ. ಸಾಕ್ಷಿ ಮುಂದುವರೆದ ನಕಾಶೆಯಲ್ಲಿ ಗ್ರಾಮ ಠಾಣಾ ಏರಿಯಾವನ್ನು ಅವರು ಗುರುತು ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ.

2. ನಿ.ಪಿ-6 ದಾಖಲೆಯನ್ನು ತೋರಿಸಲಾಗಿ ಅದರಲ್ಲಿ ನಾನು ಹೇಳಿದ ಹಾಗೆ ಬ್ಲಾಕ್ ನಂ.1 ರಿಂದ 5 ನಮೂದಿಸಿಲ್ಲ ಎಂದರೆ ಸರಿ. ನ್ಯಾಯಾಲಯದ ಅನುಕೂಲಕ್ಕೊಸ್ಕರ ನಾವು ಬ್ಲಾಕ್ ನಂಬರ್ ಮತ್ತು ಅಳತೆ ಹಾಕಿರುತ್ತೇವೆ. ನಿ.ಪಿ-6 ರಲ್ಲಿ ದಕ್ಷಿಣಕ್ಕೆ ಗುಡ್ಡ ಎಂದು ಬರೆದಿಲ್ಲ ಎಂದರೆ ಸರಿ. ಅದೇ ರೀತಿ ಭೀಮಸೇನ ಕುಲಕರ್ಣಿ ರವರ ಮನೆ ಎಂದು ನಮೂದಿಸಿಲ್ಲ ಎಂದರೆ ಸರಿ. ನಾನು ಹೇಳಿದ ಚೆಕ್ಕುಬಂದಿಯನ್ನು ವಾದಿ ಪತ್ರದಲ್ಲಿ ಬರೆಸಿರುವುದಿಲ್ಲ ಎಂದರೆ ಸರಿಯಲ್ಲ. ನಿ.ಪಿ-7 ರಲ್ಲಿ ನಮ್ಮ ಆಸ್ತಿಯ ವಿಸ್ತೀರ್ಣ 390 * 450 ಎಂದು ನಮೂದಿಸಿದೆ ಎಂದರೆ ಸರಿ. ನಿ.ಪಿ-10 ರಲ್ಲಿ ಪೂರ್ವ-ಪಶ್ಚಿಮ ಮತ್ತು ಉತ್ತರ-ದಕ್ಷಿಣ ಖಾಲಿ ಬಿಟ್ಟಿದ್ದಾರೆ ಎಂದರೆ ಸರಿ. ಅದೇ ರೀತಿ ಪೂರ್ವ-ಪಶ್ಚಿಮ ಮತ್ತು ಉತ್ತರ-ದಕ್ಷಿಣ ಎಷ್ಟು ಮೀಟರ್ ಇದೆ ಎಂದು ನಮೂದಿಸಿಲ್ಲ ಎಂದರೆ ಸರಿಯಲ್ಲ. ಅವು ಬೇರೆ-ಬೇರೆ ವಿಸ್ತೀರ್ಣ ಇರುವುದರಿಂದದ ಅವುಗಳನ್ನು ಒಟ್ಟಾರೆ ವಿಸ್ತೀರ್ಣ ತೋರಿಸಲು ಬರುವುದಿಲ್ಲ ಎನ್ನುತ್ತಾರೆ. ಬ್ಲಾಕ್ ನಂ.1 ಪೂರ್ತಿ ಖಾಲಿ ಜಾಗಿ ಇದೆ. ಬ್ಲಾಕ್ ನಂ.2 ವೆಂಕಟರಮಣ ದೇವಸ್ಥಾನ, ಭೋಜನ ಶಾಲೆ ಮತ್ತು

ಶೌಚಾಲಯಗಳು ಇರುತ್ತವೆ. ಬ್ಲಾಕ್ ನಂ.3 ಮತ್ತು 4 ರಲ್ಲಿ ರಾಘವೇಂದ್ರ ಸ್ವಾಮಿಗಳವರ ಮಠ ಮತ್ತು ಖಾಲಿ ಜಾಗ ಇದೆ. ಬ್ಲಾಕ್ ನಂ.5 ರಲ್ಲಿ ಖಾಲಿ ಜಾಗ ಇರುತ್ತದೆ. ವೆಂಕಟರಮಣ ದೇವಸ್ಥಾನ ಪುರಾತನ ಕಾಲದ್ದಾಗಿದ್ದು ಅದಕ್ಕೆ ಒಂದು ಟ್ರಸ್ಟ್ ಇದೆ ಎಂದರೆ ಸರಿ. ಅದು ನಮ್ಮದೆ ತೃತಿಯ ಮಂತ್ರಾಲಯ ಟ್ರಸ್ಟ ಆಗಿದೆ. ವೆಂಕಟರಮಣ ದೇವಸ್ಥಾನವು ತೃತಿಯ ಮಂತ್ರಾಲಯ ಎಂದು ದಾಖಲೆ ಹಾಕಿದ ಬಗ್ಗೆ ನನಗೆ ನೆನಪಿಲ್ಲ. ವೆಂಕಟರಮಣ ದೇವಸ್ಥಾನ ತೃತಿಯ ಮಂತ್ರಾಲಯ ಟ್ರಸ್ಟಿಗೆ ಸಂಬಂಧಿಸಿಲ್ಲ ಎಂದರೆ ಸರಿಯಲ್ಲ.

3. ಮಠದ ಆಸ್ತಿ ನಂ.1-2-61/1 ಅದು ನಮಗೆ ಪುರಾತನ ಕಾಲದಿಂದ ಬಂದಿರುತ್ತದೆ. ಸದರಿ ಟ್ರಸ್ಟಿಗೆ ನಾನು 1975 ರಿಂದ ಅಧ್ಯಕ್ಷನಾಗಿದ್ದೇನೆ ಅದಕ್ಕಿಂತ ಮೊದಲು ಟ್ರಸ್ಟ್ ಇರಲಿಲ್ಲ. ರಾಘವೆಂದ್ರ ದೇವಸ್ಥಾನ 1975 ರಲ್ಲಿ ದಕ್ಷಿಣ ದಿಕ್ಕಿಗೆ ತದನಂತರ ಸದರಿ ರಾಘವೇಂದ್ರ ದೇವಸ್ಥಾನವನ್ನು ಅಶ್ವಥ ನಾರಾಯಣ ದೇವಸ್ಥಾನದ ಪಕ್ಕದಲ್ಲಿ ಪುನರ್ ನಿರ್ಮಾಣ ಮಾಡಿರುತ್ತೇವೆ. ರಾಘವೇಂದ್ರ ದೇವಸ್ಥಾನ ಮೊದಲು 1ನೇ ಬ್ಲಾಕಿನಲ್ಲಿತ್ತು. ಈಗ ರಾಘವೇಂದ್ರ ದೇವಸ್ಥಾನ 3 ಮತ್ತು 4 ನೇ ಬ್ಲಾಕಿನಲ್ಲಿದೆ. ಮೊದಲು ರಾಘವೇಂದ್ರ ದೇವಸ್ಥಾನಕ್ಕೆ ಪುರಸಭೆಯವರು ನಂಬರ್ ಕೊಟ್ಟಿರಲಿಲ್ಲ. 1977-1978 ರಲ್ಲಿ ಪುರಸಭೆಯವರು ಸದರಿ ಆಸ್ತಿಗೆ ನಂಬರ್ ಕೊಟ್ಟಿರುತ್ತಾರೆ. ಪರಿಮಳ ಗುರುಕುಲ ಶಾಲೆಯನ್ನು ಪರವಾನಿಗೆ ಪಡೆದು ಕಟ್ಟಿರುತ್ತೇವೆ. ಸದರಿ ಪರವಾನಿಗೆಯನ್ನು ನಾವು ಹಾಜರು ಪಡಿಸಿರುತ್ತೇವೆ. ನಿ.ಪಿ-9 ಕಟ್ಟಡ ಪರವಾನಿಗೆ ಅಲ್ಲ ಎಂದರೆ ಸರಿಯಲ್ಲ. ನಿ.ಪಿ-9 ನೀಲಿ ನಕಾಶೆಯಲ್ಲಿ ನಾನು ಹೇಳಿದ ಪ್ರಕಾರ 5 ಬ್ಲಾಕಗಳ ವಿಸ್ತೀರ್ಣ ನಮೂದಿಸಿರುತ್ತಾರೆ.

4. ನಿ.ಪಿ-3 ರಾಘವೇಂದ್ರಸ್ವಾಮಿಗಳ ಮಠಕ್ಕೆ ಸಂಬಂಧಿಸಿದ ಖಾತಾ ಉತಾರ ಎಂದರೆ ಸರಿ. ಟ್ರಸ್ಟ್ ನೊಂದಣಿಯಾದಾಗಿನಿಂದ ನಾನೇ ಅಧ್ಯಕ್ಷನಾಗಿರುತ್ತೇನೆ. ನಿ.ಪಿ-4 ರಲ್ಲಿ ರಾಘವೇಂದ್ರಸ್ವಾಮಿಗಳ ಮಠ ಹಾಗೂ ಅಧ್ಯಕ್ಷರು ಡಾ.ಗುರುರಾಜ ದೇಶಪಾಂಡೆ ಎಂದು ತೋರಿಸಿರುತ್ತಾರೆ ಎಂದರೆ ಸರಿ. ನಿ.ಪಿ-5 ರಲ್ಲಿ ಎಷ್ಟು ಉದ್ದ ಎಷ್ಟು ಅಗಲ ಎಂದು ಚೆಕ್ಕುಬಂದಿ ನಮೂದಿಸಿಲ್ಲ ಎಂದರೆ ಸರಿ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ.

ಸಹಿ/-
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,
ಲಿಂಗಸಗೂರು.